**ಪತ್ರಿಕಾ ಪ್ರಕಟಣೆ**

**ವಿಜಯಪುರ**

**ದಿನಾಂಕ: 31.05.2021**

# ಕೊಲೆ ಮಾಡಿದ ಆರೋಪಿತ ಬಂಧನ



ದಿನಾಂಕ; 28.05.2021 ರಂದು ರಾತ್ರಿ 10.00 ಗಂಟೆ ಸುಮಾರಿಗೆ ಫಿರ್ಯಾದಿ ಯಾಸೀನ ತಂದೆ ಮೋದಿನಪಾಷ್ಯಾ ಇನಾಮದಾರ ಇವನ ತಮ್ಮನಾದ ಮೋಸಿನ ತಂದೆ ಮೋದಿನಬಾಶಾ ಇನಾಮದಾರ ಈತನು ಓಣಿಯಲ್ಲಿ ರಸ್ತೆಗೆ ಅಡ್ಡಲಾಗಿ ಹಾಕಿದ ಮಂಟಪದ ಕಬ್ಬಿಣದ ಆ್ಯಂಗಲ್ ತೆಗೆದಿದ್ದಕ್ಕೆ ಫಿರ್ಯಾದಿಯ ತಮ್ಮನ ಜೊತೆ ತಕರಾರು ಮಾಡಿ, ಫಿರ್ಯಾದಿಗೆ ಮತ್ತು ಇದರಲ್ಲಿ ಮೃತ ಮೋಸೀನ ತಂದೆ ಮೋದೀನಪಾಷ್ಯಾ ಇನಾಮದಾರ ಈತನಿಗೆ ತಲವಾರಿನಿಂದ ಹಲ್ಲೆ ಮಾಡಿದ್ದಲ್ಲದೆ ಇದೇ ಸಿಟ್ಟಿನಿಂದ ಮೃತನಿಗೆ ಕೊಲೆ ಮಾಡುವ ಉದ್ದೇಶದಿಂದ ದಿನಾಂಕ: 29.05.2021 ರಂದು ಬೆಳಗ್ಗೆ 11.00 ಗಂಟೆ ಸುಮಾರಿಗೆ ಇಬ್ರಾಹಿಮ್‌ರೋಜಾ ರಸ್ತೆ ಹೋರ್ತಿಯವರ ಮನೆಯ ಹತ್ತಿರ ಸೈಕಲ್ ಮೋಟಾರ್ ಮೇಲೆ ಹೋರಟ ಮೃತ ಮೋಸಿನ ಇನಾಮದಾರ ಈತನಿಗೆ ಇದರಲ್ಲಿಯ ಆರೋಪಿತರಾದ

1) **ಆಸೀಪ್ ತಂದೆ ಖಾಜೆಸಾಬ ಮಳ್ಳಿ**

2) **ರಫೀಕ ತಂದೆ ಸೈಯದ ನಂದ್ಯಾಳ**

3) **ಶೋಹೆಬ ತಂದೆ ಹಾಜಿಪಾಷ್ಯಾ ಖಾದ್ರಿ**

4) **ಸದ್ದಾಂ ತಂದೆ ಸಲಾವುದ್ದಿನ ಜಹಾಗಿರದಾರ**

5) **ಇಮ್ರಾನ ತಂದೆ ಮೌಲಾಲಿ ಜಮಖಂಡಿ**

6) **ಸದ್ದಾಮ ತಂದೆ ಮೌಲಾಲಿ ಜಮಖಂಡಿ**

7) **ಅಜ್ಮಲ್ ತಂದೆ ಬಸೀರ್ ಜಮಾದಾರ ಸಾ; ಎಲ್ಲರೂ ವಿಜಯಪುರ ನವಿ ಗಲ್ಲಿ ಇಬ್ರಾಹಿಮ ರೋಜಾ ಹತ್ತಿರ** ಮತ್ತು ಇನ್ನು 3-4 ಜನರು. ಕೂಡಿ ಕೈಯಲ್ಲ ತಲವಾರ, ಕಂಜರ, ಬೆಸ್ ಬಾಲ್ ಬ್ಯಾಟಗಳಂದ ಕಂಜರನಿಂದ ಎದೆಗೆ, ಹೊಟ್ಟೆಗೆ ಜೋರಾಗಿ ಚುಚ್ಚಿ ಬಾರಿ ರಕ್ತಗಾಯಪಡಿಸಿದ್ದಲ್ಲದೆ ಮೈಕೈಗೆ ಬೆಸ್ ಬಾಲ್ ಬ್ಯಾಟಗಳಂದ ಹೊಡೆದು ರಕ್ತಗಾಯ ಪಡಿಸಿ, ಕೊಲೆ ಮಾಡಿದ ಬಗ್ಗೆ ಗಾಂಧಿ ಚೌಕ ಪೋಲೀಸ್ ಠಾಣೆ ಗುನ್ನೆ ನಂ: 113/2021 ಕಲಂ: 143, 147, 148, 341, 324, 307,302, 504, 506 ಸಹಿತ 149 ಐ.ಪಿ.ಸಿ ನೇದ್ದಕ್ಕೆ ದಾಖಲು ಮಾಡಿಕೊಂಡು ತನಿಖೆ ಕೈಕೊಂಡಿದ್ದು ಇರುತ್ತದೆ.

ಶ್ರೀ ಅನುಪಮ್ ಅಗರವಾಲ್, ಪೊಲೀಸ ಅಧೀಕ್ಷಕರು ವಿಜಯಪುರ, ಶ್ರೀ, ರಾಮ್ ಎಲ್ ಅರಸಿದ್ದಿ, ಹೆಚ್ಚುವರಿ ಜಿಲ್ಲಾ ಪೊಲೀಸ ಅಧೀಕ್ಷಕರು, ವಿಜಯಪುರ ಹಾಗೂ ಶ್ರೀ ಕೆ.ಸಿ.ಲಕ್ಷ್ಮೀನಾರಾಯಣ. ಈ ಪೊಲೀಸ್ ಉಪಾಧೀಕ್ಷಕರು, ವಿಜಯಪುರ ರವರ ಮಾರ್ಗದರ್ಶನದಲ್ಲಿ, ಶ್ರೀ ರವೀಂದ್ರ ಕೆ ನಾಯ್ಕೋಡಿ ಪಿಐ ಗಾಂಧಿ ಚೌಕ ಪೊಲೀಸ್ ಠಾಣೆ. ಶ್ರೀ ಎಸ್.ಬಿ.ಗೌಡರ ಪಿ.ಎಸ್.ಐ (ಕಾ&ಸು) ಗಾಂಧಿಚೌಕ, ಶ್ರೀಮತಿ ಪಿ.ಎಮ್.ಚೌರ ಮ.ಪಿ.ಎಸ್.ಐ, ಶ್ರೀ ಆರ್.ಬಿ.ಕೂಡಗಿ (ಸಿಬಿ) ಗಾಂಧಿಚೌಕ, ಹಾಗೂ ಸಿಬ್ಬಂದಿ ಜನರಾದ ಎಚ್.ಎಚ್. ಜಮಾದಾರ, ಬಿ ಕೆ ಗುಡುಮನಿ, ಜಿ ವಾಯ್ ದಾಸರ, ಎಸ್.ವ್ಹಿ ಜೋಗಿನ, ಎನ್.ಕೆ.ಮುಲ್ಲಾ, ಬಶೀರಅಹ್ಮದ.ಎಂ.ಶೇಖ, ರಾಮನಗೌಡ ಬಿರಾದಾರ, ಎ.ಎಚ್ ಹಳ್ಳಿ, ಬಸವರಾಜ ದಿನ್ನಿ, ಮಹೇಶ ಐನಾಪೂರ, ಸಿದ್ದು ಬಿರಾದಾರ, ಎಸ್.ಎಸ್ ಹಂಡಿ, ವಿ.ಎನ್.ಶಹಾಪುರ ರವರನ್ನೊಳಗೊಂಡ ತನಿಖಾ ತಂಡವು ಇಂದು ದಿನಾಂಕ: 31.05.2021 ರಂದು 07 ಜನ ಆರೋಪಿತರನ್ನು ಕೊಲೆಯಾದ 3 ದಿನಗಳಲ್ಲಿಯೇ ಅತೀ ಶಿಘ್ರವಾಗಿ ಪತ್ತೆ ಮಾಡಿ ದಸ್ತಗಿರಿ ಮಾಡಿದ್ದು ಇರುತ್ತದೆ. ಅಲ್ಲದೆ ಕೃತ್ಯಕ್ಕೆ ಬಳಸಿದ ಎರಡು ತಲವಾರ, ಒಂದು ಬೇ ಬಾಲ್ ಬ್ಯಾಟ್ ಒಂದು ಕಂಜರ ಮತ್ತು ಒಂದು ಕಾರ್ ಜಪ್ತ ಮಾಡಿದ್ದು ಇರುತ್ತದೆ. ಈ ಪ್ರಕರಣದ ಪತ್ತೆ ಕಾರ್ಯದಲ್ಲಿ ಕಾರ್ಯನಿರ್ವಹಿಸಿದ ಅಧಿಕಾರಿ ಹಾಗೂ ಸಿಬ್ಬಂದಿಗಳ ಕರ್ತವ್ಯವನ್ನು ಮಾನ್ಯ ಜಿಲ್ಲಾ ಪೊಲೀಸ್ ಅಧೀಕ್ಷಕರು ಶ್ಲಾಘಿಸಿದ್ದಾರೆ.

ಪೊಲೀಸ್ ಅಧೀಕ್ಷಕರು,
ವಿಜಯಪುರ ಜಿಲ್ಲೆ.

ಗೆ,

ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು ವಿಜಯಪುರ.

ಹಾಗೂ ವಿಜಯಪುರ. ಜಿಲ್ಲೆಯ ಎಲ್ಲ ಪತ್ರಕರ್ತಕರು ಹಾಗೂ ಛಾಯಾಗ್ರಾಹಕರು